ಪರಹಿತಮ್ ಫೌಂಡೇಶನ್‌ನ ದ್ವೈಮಾಸಿಕ ಪತ್ರಿಕೆ

# ವಿಹಿತಮ್

ಸಂಪುಟ ೧ ಏಪ್ರಿಲ್–ಮೇ ೨೦೨೨ ಸಂಚಿಕೆ

## ಶುಭಕೃತ್‌ನಿಂದ ಶುಭಾರಂಭ!



ಯುಗಾದಿ ಎಂದರೆ ಆರಂಭ! ಹೊಸ ದಿನ, ಹೊಸ ಸಂವತ್ಸರ, ಹೊಸ ಯುಗದ ಆರಂಭ. ಈ ಆರಂಭ ಶುಭವಾಗಿದ್ದರೆ ಮುಂಬರುವ ಎಲ್ಲಾ ದಿನಗಳೂ ಶುಭವಾಗಿರುತ್ತವೆ. ಈ ವರ್ಷವು ನಮಗಷ್ಟೇ ಅಲ್ಲ, ಮಕ್ಕಳಿಗೂ ಒಳ್ಳೆಯದಾಗಲಿ ಎಂಬ ಆಶಯ ನಮ್ಮದು.

ಶುಭಕೃತ್ ಸಂವತ್ಸರದ ಮೊದಲ ದಿನವನ್ನು ನಾವು ಅನಾಥಾಶ್ರಮದ ಮಕ್ಕಳೊಂದಿಗೆ ಆಚರಿಸಿದೆವು.

ಅನಾಥಾಲಯದ ಮಕ್ಕಳಿಗೆ ಹೊಸ ಬಟ್ಟೆಯನ್ನು ನೀಡಿ, ಅವರೊಂದಿಗೆ ಆಟವಾಡಿ ಹಬ್ಬವನ್ನು ಸಂಭ್ರಮಿಸಿದೆವು.


ಹೊಸ ಬಟ್ಟೆಯನ್ನು ಪಡೆದಾಗ ಮಕ್ಕಳಿಗಾದ ಆನಂದವನ್ನು ಅವರ ಮುಖದಲ್ಲಿ ಕಂಡು ನಮ್ಮ ಮನವೂ ಹಿಗ್ಗಿತು. ಮಕ್ಕಳು ಸಡಗರದಿಂದ ಹೊಸ ಬಟ್ಟೆಯನ್ನು ಸ್ವೀಕರಿಸಿದ್ದನ್ನು ಕಂಡು ನಮ್ಮಲ್ಲಿ ಸಾರ್ಥಕತೆಯ ಭಾವ ಮೂಡಿತು.

## ಕಲಿ~ನಲಿ



ಬೇಸಿಗೆಯಲ್ಲಿ ಹಕ್ಕಿಗಳಿಗೆ, ಪ್ರಾಣಿಗಳಿಗೆ ಆಹಾರ, ನೀರು ಸ್ವೀಕರಿಸಲು ಅನುಕೂಲವಾಗುವಂತಹ ಸಣ್ಣ ಪಾತ್ರೆಗಳನ್ನು (ಬರ್ಡ್ ಫೀಡರ್) ಅಲಂಕರಿಸಿ, ಧಾನ್ಯ ಮತ್ತು ನೀರನ್ನು ಇರಿಸಲಾಯಿತು. ಅವುಗಳು ಖಾಲಿಯಾದ ಮೇಲೆ ಪುನಃ ತುಂಬಿಸಲು ಮಕ್ಕಳಿಗೆ ಹೇಳಿಕೊಟ್ಟು, ಪರಿಸರ ರಕ್ಷಣೆಯ ಮಹತ್ವದ ಬಗ್ಗೆ ತಿಳಿಸಲಾಯಿತು.

ಕೆಲವು ಭಾನುವಾರಗಳನ್ನು ಆಶ್ರಯ ಕೇಂದ್ರವೊಂದರ ಮಕ್ಕಳ ಜೊತೆ ಕಳೆದೆವು. ಮಕ್ಕಳಿಗೆ ಗಣಿತ, ಚಿತ್ರ ಬಿಡಿಸುವುದನ್ನು, ಬಣ್ಣ ತುಂಬುವುದನ್ನು ಹೇಳಿಕೊಡಲಾಯಿತು. ನದಿ–ದಡ ಹಾಗೂ ಸ್ಮರಣಶಕ್ತಿಗೆ ಸಂಬಂಧಿಸಿದ ಆಟಗಳು ಮಕ್ಕಳಿಗೆ ಬಹಳ ಖುಷಿ ನೀಡಿದವು.



ಶ್ರೀರಾಮನವಮೀಯ ಪ್ರಯುಕ್ತ ರಾಮಾಯಣದ ಕಥೆಯನ್ನು ಮಕ್ಕಳಿಗೆ ಹೇಳಿದೆವು. ಮಕ್ಕಳು ಬಹಳ ಆಸಕ್ತಿಯಿಂದ ಕೇಳಿದರು. ಭಾರತದ ಭವ್ಯ ಇತಿಹಾಸ ಹಾಗೂ ನಿತ್ಯ-ಶಾಶ್ವತ ತತ್ತ್ವಗಳು ಮಕ್ಕಳ ಹೃದಯದಲ್ಲಿ ಭದ್ರವಾಗಿ ಬೇರೂರಬೇಕು, ಅದರಿಂದ ಅವರು ಸ್ಫೂರ್ತಿ ಪಡೆಯಬೇಕು ಎಂಬ ಉದ್ದೇಶದಿಂದ ನೀತಿ ಕಥೆಗಳನ್ನು ಹೇಳಲಾಯಿತು.



## ಮರವನ್ನು ನೋಯಿಸುವುದು ಬೇಡ!

ಮರಗಳಿಗೆ ಭಿತ್ತಿ ಪತ್ರವನ್ನು ಅಂಟಿಸುವ ನಿಟ್ಟಿನಲ್ಲಿ ನೂರಾರು ಮೊಳೆ ಹಾಗೂ ಸ್ಟೇಪ್ಲರ್ ಪಿನ್ ಹೊಡೆಯಲಾಗುತ್ತದೆ. ಇದರಿಂದ ಮರಗಳಿಗೆ ಹಾನಿ ಉಂಟಾಗುತ್ತದೆ. ಅವುಗಳಿಗೂ ಜೀವವಿದೆ. ಮೊಳೆ ಚುಚ್ಚಿದರೆ ನೋವಾಗುತ್ತದೆ. ಹಾಗಾಗಿ ಮರಗಳನ್ನು ಈ ಹಾನಿಕಾರಕ ವಸ್ತುಗಳಿಂದ ಮುಕ್ತಗೊಳಿಸಿದೆವು.

ಮರಗಳಿಗೆ ಹೊಡೆದ ನೂರಾರು ಮೊಳೆ ಹಾಗೂ ಸ್ಟೇಪ್ಲರ್ ಪಿನ್‌ಗಳನ್ನು ನಾವು ತೆಗೆದೆವು. ಈ ಮೂಲಕ ಒಂದು ಅಭಿಯಾನವನ್ನು ನಾವು ಆರಂಭಿಸಿದ್ದೇವೆ.









PARAHITAM
FOUNDATION®

# ನಿಮ್ಮೊಂದಿಗೆ ನಾವು!



ಕಬ್ಬನ್ ಪಾರ್ಕಿನಲ್ಲಿ ಮಾನಸಿಕ ಅರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಅಂಗವಾಗಿ ಸ್ಫೂರ್ತಿದಾಯಕ ಸಂದೇಶದ ಗ್ರೀಟಿಂಗ್ ಕಾರ್ಡ್ ಹಾಗೂ ಚಾಕಲೇಟ್‌ಗಳನ್ನು ಜನರಿಗೆ ಹಂಚಲಾಯಿತು. ಸಮಾಜದಲ್ಲಿ ಧನಾತ್ಮಕ ವಾತಾವರಣವನ್ನು ನಿರ್ಮಿಸುವ ಒಂದು ಸಣ್ಣ ಪ್ರಯತ್ನ ಇಲ್ಲಿ ನಡೆಯಿತು.



ನಮ್ಮ ತಂಡದ ಹಲವು ಕಾರ್ಯಕರ್ತರು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಸ್ಫೂರ್ತಿದಾಯಕ ಸಂದೇಶಗಳ ಕಾರ್ಡ್‌ಗಳನ್ನು ರಚಿಸಿದ್ದರು. ಜನರು ಕೆಲವರು ತಮ್ಮ ಬಳಿ ಇಟ್ಟುಕೊಳ್ಳಲು ತಮಗಿಷ್ಟವಾದ ಕಾರ್ಡ್ ಆರಿಸಿಕೊಂಡರೆ, ಇನ್ನೂ ಕೆಲವರು ತಮ್ಮ ಪ್ರೀತಿಪಾತ್ರರಿಗೆ ನೀಡಲು ಆರಿಸಿಕೊಂಡರು.

ಜನರ ಪ್ರಶಂಸೆ ಹಾಗೂ ಪ್ರೀತಿಭರಿತ ಮಾತುಗಳು ಈ ರೀತಿಯ ಇನ್ನೂ ಹೆಚ್ಚು ಕಾರ್ಯಕ್ರಮಗಳನ್ನು ಅಯೋಜಿಸಲು ನಮಗೆ ಪ್ರೇರಣೆ ನೀಡಿದೆ.



ಮೇ ತಿಂಗಳನ್ನು 'ಮಾನಸಿಕ ಅರೋಗ್ಯ ಮಾಸ' ಎಂದು ಆಚರಿಸಲಾಗುತ್ತದೆ. ಅದರ ಅಂಗವಾಗಿ ಮಾನಸಿಕ ಆರೋಗ್ಯ, ಅದಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಪರಿಹಾರಗಳ ಬಗ್ಗೆ ೮ ದಿನಗಳ ಕಾಲ ಸಮಾಜ ಮಾಧ್ಯಮದಲ್ಲಿ ಕೆಲವು ಮಾಹಿತಿ ಪ್ರಸ್ತುತಪಡಿಸಿದೆವು.



## ಹಂಚಿ ಬಾಳಿದರೆ ಪರಮಸುಖ

ನಮ್ಮ ಸಮಾಜದಲ್ಲಿಯೇ ಇದ್ದರೂ ನಮ್ಮಿಂದ ಸ್ವಲ್ಪ ಬೇರೆಯಾಗಿ ಬದುಕುವ ಜನಾಂಗ ಎಂದರೆ ತೃತೀಯ ಲಿಂಗದವರು. ಈ ಹಿಂದೆ ಅವರನ್ನು ಸಮಾಜದಿಂದ ಸ್ವಲ್ಪ ದೂರವೇ ಇರಿಸಿ ನೋಡುವ ಪರಿಸ್ಥಿತಿಯಿತ್ತು. ಆದರೆ ಇತ್ತೀಚೆಗೆ ಈ ಮನೋಭಾವದಿಂದ ಸಮಾಜ ಹೊರಬರುತ್ತಿದೆ. ಇದು ಸಂತೋಷದ ಸಂಗತಿ. ಈ ಜನಾಂಗಕ್ಕೂ ನಾವು ಒಳಿತನ್ನು ಮಾಡಬೇಕು ಎಂಬ ಹಂಬಲವು ಗಟ್ಟಿಯಾಗಿತ್ತು.

ವಿಜಯನಗರದಲ್ಲಿ ತೃತೀಯ ಲಿಂಗದ ೧೫ ಜನರಿಗೆ ನಾವು ಊಟವನ್ನು ನೀಡುವ ಮೂಲಕ ಧನ್ಯರಾದೆವು!



ನಮ್ಮ ತಂಡದ ಪ್ರತಿಯೊಬ್ಬ ಕಾರ್ಯಕರ್ತರ ಜನ್ಮದಿನದಂದು ಅಗತ್ಯವಿರುವ ಹಸಿದವರಿಗೆ ಊಟ ಹಂಚಲಾಗುತ್ತದೆ. ಕಳೆದ ಎರಡು ತಿಂಗಳಲ್ಲಿ ನಮ್ಮ ೮ ಜನ ಕಾರ್ಯಕರ್ತರ ಜನ್ಮದಿನವಿತ್ತು.

ಈ ಶುಭಸಂದರ್ಭದಲ್ಲಿ ಒಟ್ಟು ಸುಮಾರು ೮೦ ಜನರಿಗೆ ಊಟ ನೀಡಲಾಯಿತು. ದಾನಿಗಳ ಸಹಕಾರದಿಂದ ಕೆ.ಆರ್.ರಸ್ತೆಯ ಶ್ರೀ ಸಾಯಿ ವೃದ್ಧಾಶ್ರಮದ ೩೦ ಜನರಿಗೆ ಹಾಗೂ ಬೀದಿಬದಿಯಿರುವ ೨೫ ಅಸಹಾಯಕರಿಗೆ ಊಟ ನೀಡಲಾಯಿತು.





## ಸಾಂದೀಪನೀ ಗುರುಕಲಕ್ಕೆ ಪರಹಿತಮ್ ನೆರವು..

**ಸಾಂದೀಪನೀ ಗುರುಕುಲದಲ್ಲಿ ೫ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಶಾಲೆಯ ಫೀಸ್ ಕಟ್ಟಲು ಹಾಗೂ ಪುಸ್ತಕ ಖರೀದಿಗೆ ಹಣದ ಅವಶ್ಯಕತೆಯಿತ್ತು. ನಮ್ಮ ಫೌಂಡೇಷನ್‌ನಿಂದ ಈ ಬಗ್ಗೆ ಮಾಹಿತಿಯನ್ನು ಎಲ್ಲೆಡೆ ಪಸರಿಸಲಾಗಿತ್ತು. ಸಾರ್ವಜನಿಕರ ಸಹಾಯದಿಂದ ಈ ಅವಶ್ಯಕತೆಯನ್ನು ನಾವು ಪೂರೈಸಿದೆವು. ಇದಕ್ಕೆ ಸಹಾಯ ಮಾಡಿದ ಪ್ರತಿಯೊಬ್ಬರನ್ನೂ ನಾವು ಸ್ಮರಿಸಿಕೊಳ್ಳುತ್ತೇವೆ. ಅವರಿಗೆ ಒಳಿತಾಗಲಿ ಎಂದು ಪ್ರಾರ್ಥಿಸುತ್ತೇವೆ.**

## ಹಾಗೆಯೇ, ವರ ಫೌಂಡೇಶನ್ ಅವರಿಗೆ ಅವಶ್ಯಕತೆಯಿದ್ದ ಒಂದು ಸ್ಟೋವ್ ನೀಡಿದೆವು.

**ಒಂದೊಳ್ಳೇ ಮಾತು:**

**"ನೀವು ನಿಮ್ಮನ್ನು ಪಡೆದುಕೊಳ್ಳಬೇಕಾದರೆ, ಇನ್ನೊಬ್ಬರ ಸೇವೆಯಲ್ಲಿ ನಿಮ್ಮನ್ನು ನೀವೇ ಕಳೆದುಕೊಳ್ಳಬೇಕು."**

**– ಮಹಾತ್ಮಾ ಗಾಂಧಿ**

PARAHITAM FOUNDATION®

# ಪರಹಿತಮ್ ಎಂಬ ಕುಟುಂಬದ ಒಂದು ಒಳನೋಟ

"ಅಣ್ಣ, ನೀವು ಮುಂದಿನ ವಾರನೂ ಬರ್ತೀರ ಅಲ್ವ?" ಎಂದು ವಿಶಾಲ್ ಕೇಳಿದ.

ವಿಶಾಲ್ ಅನಾಥಾಶ್ರಮವೊಂದರ ಬಾಲಕ. ಪರಹಿತಮ್ ಫೌಂಡೇಶನ್‌ನಿಂದ ಅನಾಥಾಶ್ರಮಕ್ಕೆ ಭೇಟಿ ಕೊಟ್ಟಾಗ ನಾನೂ ಹೋಗಿದ್ದೆ. ಅಲ್ಲಿ ವಿಶಾಲ್ ಪರಿಚಯವಾಗಿದ್ದ. ಅನಾಥಾಶ್ರಮದ ಮಕ್ಕಳಿಗೆ ಪಾಠ ಮಾಡುವುದು, ಆಟ ಆಡಿಸುವುದು, ಕಥೆ ಹೇಳುವುದು ಹೀಗೆ ಬಗೆಬಗೆಯ ಚಟುವಟಿಕೆಗಳನ್ನು ಪರಹಿತಮ್‌ನಿಂದ ಮಾಡಿಸಲಾಗುತ್ತದೆ. ಅವುಗಳಲ್ಲಿ ಭಾಗವಹಿಸಲು ಕೆಲವು ಮಕ್ಕಳು ಹಿಂಜ-ರಿಯುತ್ತಾರೆ. ವಿಶಾಲ್ ಕೂಡ ಹಾಗೆಯೇ ಇದ್ದ. ಅವನ ಹತ್ತಿರವೇ ಹೋಗಿ ಅವನಿಗರ್ಥವಾಗುವ ಹಾಗೆ ಹೇಳಿಕೊಟ್ಟಾಗ ಅವನೂ ಕಲಿಯಲು ಉತ್ಸಾಹ ತೋರಿಸಿದ.

"ಈ ವಾರ ನಾವು ನಿಮ್ಮಲ್ಲಿಗೆ ಬರಬಹುದೇ?" ಎಂದು ಅನಾಥಾಶ್ರಮದವರನ್ನು ಕೇಳುವುದರಿಂದ ತಯಾರಿ ಆರಂಭವಾಗುತ್ತದೆ. ನಂತರ ಮಕ್ಕಳಿಗೆ ಇಷ್ಟವಾಗುವ ರೀತಿಯಲ್ಲಿ ಅವರಿಗೆ ಹೇಗೆ ಪಾಠ ಮಾಡಬಹುದು ಎಂದು 'ಬ್ರೇನ್ ಸ್ಟಾರ್ಮಿಂಗ್' ಮಾಡಲಾಗುತ್ತದೆ. ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಹೊಂದಿಸುವುದು, ಕಾರ್ಯಕರ್ತರನ್ನು ನಿಯೋಜಿಸುವುದು ಹೀಗೆ ತಯಾರಿ ಮುಂದುವರೆಯುತ್ತದೆ. ಇಷ್ಟೆಲ್ಲ ಆಗಿ, ಇವೆಂಟ್ ಮುಗಿಸಿ ವಾಪಸ್ಸು ಹೊರಡುವಾಗ ಮಕ್ಕಳು "ಮುಂದಿನ ವಾರನೂ ಬರ್ತೀರ ಅಲ್ವ?" ಎಂದು ಕೇಳಿದಾಗ, ಮಾಡಿದ ಅಷ್ಟೂ ಪ್ರಯತ್ನ ಸಾರ್ಥಕ ಎನಿಸಿಬಿಡುತ್ತದೆ. ಅವರ ಈ ಮಾತು ಇನ್ನೂ ಹೆಚ್ಚು ಸೇವೆ ಮಾಡಲು ನಮಗೆ ಸ್ಫೂರ್ತಿ ನೀಡುತ್ತದೆ.

*ಪರಹಿತಮ್ ನನಗೆ ಶಾಲೆಯಿದ್ದಂತೆ:*

ಒಂದು ಘಟನೆ ನೆನಪಿಸಿಕೊಳ್ಳುತ್ತೇನೆ. ಒಮ್ಮೆ ಕಾರ್ಯಕರ್ತರೊಬ್ಬರ ಜನ್ಮದಿನದ ಪ್ರಯುಕ್ತ ಊಟ ಹಂಚಲು ಬೀದಿಬದಿಯ ಬಡ ಕುಟುಂಬವೊಂದರ ಬಳಿ ಹೋದೆವು. ಆ ಕುಟುಂಬವು ಗೊಂಬೆ ಮಾಡಿ, ಮಾರಿ ಜೀವನ ನಡೆಸುತ್ತದೆ. ಅವರು ಬೀದಿ ಬದಿಯಲ್ಲಿಯೇ ಟೆಂಟ್ ಹಾಕಿಕೊಂಡು ವಾಸ ಮಾಡುತ್ತಾರೆ. "ಊಟ ತೊಗೋತೀರ?" ಎಂದು ನಾವು ಕೇಳಿದಾಗ, ಆ ಕುಟುಂಬದ ಯಜಮಾನ ನಮಗೆ ಕೈ ಮುಗಿದು "ತುಂಬಾ ಧನ್ಯವಾದ. ಆದರೆ ಈ ಹೊತ್ತಿನ ಅಡುಗೆ ಆಗಿಬಿಟ್ಟಿದೆ. ಆದ್ದರಿಂದ ಬೇರೆ ಯಾರಾದರೂ ಅವಶ್ಯಕತೆ ಇರುವವರಿಗೆ ಕೊಟ್ಟುಬಿಡಿ" ಎಂದು ಹೇಳಿದಾಗ, ನನಗೆ ರೋಮಾಂಚನವಾಯಿತು. ಎಂತಹ ಸ್ವಾಭಿಮಾನ, ಎಂತಹ ಸಂತೃಪ್ತಿ ಅವರದ್ದು ಎನ್ನಿಸಿತು.

ಮಹಾಪುರುಷರಿಂದ ಹಿಡಿದು ಸಮಾಜದ ಕಟ್ಟಕಡೆಯ ವ್ಯಕ್ತಿಯಿಂದಲೂ ನಾವು ಕಲಿಯುವುದಿರುತ್ತದೆ ಎಂದು ಪರಹಿತಮ್ ನನಗೆ ತೋರಿಸಿಕೊಟ್ಟಿದೆ. ಅನಾಥ ಮಕ್ಕಳು, ವೃದ್ಧರು, ಸಾರ್ವಜನಿಕರು ಹೀಗೆ ಎಲ್ಲರಿಂದಲೂ ಕಲಿಯುವುದಕ್ಕೆ ವಿಷಯವಿದೆ. ನಮ್ಮಲ್ಲಿ ಅನೇಕ ಪ್ರತಿಭಾವಂತ ಕಾರ್ಯಕರ್ತರಿದ್ದಾರೆ, ಒಂದು ಇವೆಂಟ್‌ನ ಯಶಸ್ಸಿಗಾಗಿ ಶ್ರಮ ಪಡುವವರಿದ್ದಾರೆ, ಅನೇಕ ಯೋಗ್ಯ ಸಲಹೆಗಳನ್ನು ನೀಡುವವರಿದ್ದಾರೆ, ಇವೆಂಟ್‌ಗೆ ಬರಲಾಗದಿದ್ದರೆ ಕ್ಷಮೆ ಕೇಳುವವರಿದ್ದಾರೆ, ಪ್ರತಿ ಇವೆಂಟ್ ಆದ ಮೇಲೂ ಧನ್ಯವಾದ ಹೇಳುವವರೂ ಇದ್ದಾರೆ. ಅಂತಹ ಕಾರ್ಯಕರ್ತರೊಡನೆ ಕೆಲಸ, ಹಲವಾರು ಜನರ ಭೇಟಿ, ಹಲವಾರು ಸನ್ನಿವೇಶಗಳಲ್ಲಿ ಭಾಗಿ – ಇವು ಬದುಕಿಗೆ ಬಹಳ ಪಾಠ ಹೇಳಿಕೊಡುತ್ತಲಿವೆ. ಬಹುಮುಖ್ಯವಾಗಿ "ಎಲ್ಲರನ್ನೂ ಪ್ರೀತಿಸಬೇಕು" ಎಂಬುದನ್ನು ಮತ್ತೊಮ್ಮೆ ಮನದಟ್ಟು ಮಾಡಿಸಿದೆ.

**ಪರಹಿತಮ್ ಎಂಬ ಮನೆ:**

ಪರಹಿತಮ್ ನನಗೆ ಕುಟುಂಬದಂತೆಯೇ ಆಗಿಬಿಟ್ಟಿದೆ. ಕೆಲವೇ ಕೆಲವು ತಿಂಗಳ ಹಿಂದೆ ಪ-ರಿಚಯವಾದವರು ಎಷ್ಟೋ ವರ್ಷಗಳ ಸ್ನೇಹಿತರಂತೆ ಆಗಿಬಿಟ್ಟಿದ್ದಾರೆ. ದುಃಖದಲ್ಲಿರುವುದನ್ನು ಗಮನಿಸಿ 'ಏನಾಯ್ತು' ಎಂದು ಕೇಳುತ್ತಾರೆ. ಖುಷಿಯ ಕ್ಷಣಗಳನ್ನೂ ಹಂಚಿಕೊಂಡು ಸಂತಸ ಪಡುತ್ತಾರೆ. ಕೇವಲ ಒಂದು ಕಾರ್ಯಕ್ರಮಕ್ಕೆ ಬಂದವರೂ ಕೂಡ ಚಿರಪರಿಚಿತರಂತೆ ಅನ್ನಿಸಿಬಿಡುತ್ತದೆ. ಹಾಂ! ಪ್ರತಿ ಇವೆಂಟ್‌ನ ಕೊನೆಗೆ ಜ್ಯೂಸ್ ಕುಡಿಯುವಾಗ ಒಬ್ಬರನ್ನೊಬ್ಬರು ಕಾಲೆಳೆದುಕೊಂಡು ಸಂಭ್ರಮಿಸುವ ಸಂಪ್ರದಾಯವಂತೂ ಸುಂದರ. ಒಟ್ಟಿನಲ್ಲಿ ಇದೊಂದು ಮರೆಯಲಾಗದ ಬಾಂಧವ್ಯ.

ಸಮಾಜಕ್ಕಾಗಿ ಏನನ್ನಾದರೂ ಕೊಡುವುದು ಎಂಬುದೊಂದು ನೆಪವಷ್ಟೇ, ನಿಜವಾಗಿಯೂ ನಮ್ಮನ್ನು ನಾವು ಪಡೆದುಕೊಳ್ಳುತ್ತೇವಂತೆ. ಅದಕ್ಕಾಗಿ ಪರಹಿತಮ್. ಈ ಕಾರ್ಯದಲ್ಲಿ ಯಾರೆಲ್ಲ ನನಗೆ ಜೊತೆಯಾಗಿದ್ದೀರೋ, ಜೊತೆಯಾಗುತ್ತೀರೋ ಅವರೆಲ್ಲರಿಗೂ ನಾನು ಧನ್ಯವಾದ ಅರ್ಪಿಸುತ್ತೇನೆ.



**– ಗಣೇಶ ಹೆಗಡೆ**

## ಸಂಪರ್ಕ:

8088064074

parahitam_foundation

parahitam.foundation@gmail.com

www.parahitam.org

PARAHITAM FOUNDATION®